<u>ದಿನಾಂಕಃ 09.06.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು</u>

<u>ಪಾಟೀ ಸವಾಲು:- ವಾದಿಯರ ಪರವಾಗಿ Sri. NIB, ವಕೀಲರಿಂದ</u>

1. ನಾನು 2017 ರಿಂದ ಇಲ್ಲಿಯವರೆಗೆ ಗ್ರಾಮ ಪಂಚಾಯತಿ ಅಧಿಕಾರಿಯಾಗಿ ವಡವಿ ಗ್ರಾಮ ಪಂಚಾಯತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದ ದಾವಾ ಆಸ್ತಿ ಕುರಿತು ನನಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಯು ಪಕ್ಕಿರಪ್ಪನ ಹೆಸರಿನಲ್ಲಿದ್ದ ಆಸ್ತಿ ಆಗಿರುತ್ತದೆ. ದಾವಾ ಆಸ್ತಿಯ ಕುರಿತು ಉತಾರ ದಾಖಲೆಗಳನ್ನು ನೋಡಿರುತ್ತೇನೆ. ಪಕ್ಕಿರಪ್ಪನಿಗೆ ದಾವಾ ಆಸ್ತಿಯು ಯಾವ ನಾತೆಯಿಂದ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.

2. ದಾವಾ ಆಸ್ತಿಯು ಪಕ್ಕಿರಪ್ಪನ ಸ್ವಯಾರ್ಜಿತ ಆಸ್ತಿಯೇ ಅಥವಾ ಪಿತ್ರಾರ್ಜಿತ ಆಸ್ತಿಯೇ ಎಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಪಕ್ಕಿರಪ್ಪನಿಗೆ ಪಿತ್ರಾರ್ಜಿತವಾಗಿ ಬಂದಂತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಪಕ್ಕಿರಪ್ಪನಿಗೆ 5 ಜನ ಸಹೋದರರು ಹಾಗು ಇಬ್ಬರು ಸಹೋದರಿಯರು ಇರುತ್ತಾರೆ ಎಂದರೆ ಸರಿಯಲ್ಲ. ಪಕ್ಕಿರಪ್ಪನಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇದ್ದಾನೆ ಎಂದರೆ ಸರಿ.

3. ದಾವಾ ಆಸ್ತಿಯು ಇಲ್ಲಿಯವರೆಗು ಕೃಷಿ ಜಮೀನು ಆಗಿ ಪಹಣಿ ಪತ್ರಿಕೆಯಲ್ಲಿ ನಮೂದು ಇದೆ ಎಂದರೆ ಸರಿ. ದಾವಾ ಆಸ್ತಿಯು ಪಕ್ಕಿರಪ್ಪನ ಸಹೋದರರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಪ್ರಸ್ತುತ ದಾವಾ

ಆಸ್ತಿಯು ಪಕ್ಕಿರಪ್ಪ ಹಾಗು ಆತನ ಸಹೋದರರ ಜಂಟಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗು ಹಾಗು ಪಂಚಾಯತಿಗು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪಂಚಾಯತಿಯು ದಾವಾ ಆಸ್ತಿಯನ್ನು ಖರೀದಿಸಿರುವ ಕಾರಣ ಸಂಬಂಧ ಇರುತ್ತದೆ.

4. ಯಾವುದೇ ಕಾನೂನುಬದ್ದ ಖರೀದಿ ಕಾಗದವಾದರೆ ಪಹಣಿ ಪತ್ರಿಕೆಗಳು ಬದಲಾವಣೆ ಆಗುತ್ತದೆ ಎಂದರೆ ಸರಿಯಲ್ಲ. ಕಾನೂನುಬದ್ಧವಾಗಿ ಪ್ರತಿವಾದಿ ನಂ.1 ಮತ್ತು 2 ರವರು ಖರೀದಿಸದೆ ಇರುವ ಕಾರಣ ಪಹಣಿ ಪತ್ರಿಕೆಗಳು ಬದಲಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 28.06.2006 ರಂದು ಪ್ರತಿವಾದಿ ನಂ.1 ಮತ್ತು 2 ರವರು ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ. ಖರೀದಿ ಕಾಲಕ್ಕೆ ನಾನು 2 ನೇ ಪ್ರತಿವಾದಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿ. ನನಗೆ ಖರೀದಿಯಾಗಿರುವ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ದಾಖಲೆ ನೋಡಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

5. ನಾನು ಖರೀದಿ ಕಾಲಕ್ಕೆ ಇರದೆ ಇರುವ ಕಾರಣ ಖರೀದಿಯ ವ್ಯವಹಾರದ ಕುರಿತು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ದಾಖಲೆಗಳ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದು ನಾನು ಹೇಳಿರುವ ವಿಚಾರಗಳು ದಾಖಲೆಗಳಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ.

6. ಯಾವುದೇ ಆಸ್ತಿಯನ್ನು ಖರೀದಿಸಲು ಕುಟುಂಬ ಸದಸ್ಯರ ಸಂಪೂರ್ಣ ಒಪ್ಪಿಗೆ ಮತ್ತು ಸಹಿ ಬೇಕಾಗುತ್ತದೆ ಎಂದರೆ ಸಾಕ್ಷಿಯು ನನಗೆ

ಆ ಬಗ್ಗೆ ಗೋತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ.1 ಕ್ಕೆ ಮಾಲೀಕರು ಹಾಗು ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ನಿಡಿ.1 ರ ಸಾಕ್ಷಿದಾರರು ವಡವಿ ಗ್ರಾಮದವರು ಆಗಿರುತ್ತಾರೆ. ನಿಡಿ.1 ಸಾಕ್ಷಿದಾರರ ವಿಚಾರಣೆಯನ್ನು ನಾನು ನ್ಯಾಯಾಲಯಕ್ಕೆ ಬರುವ ಪೂರ್ವದಲ್ಲಿ ವಿಚಾರಣೆ ಮಾಡಿರುತ್ತೇನೆ.

7. ನಿಡಿ.1 ರ ಸಾಕ್ಷಿದಾರರ ವಡವಿ ಗ್ರಾಮದವರು ಅಲ್ಲ ಎಂದರೆ ಸರಿಯಲ್ಲ. ನಿಡಿ.1 ರ ಒಬ್ಬ ಸಾಕ್ಷಿದಾರರ ಗ್ರಾಮ ಪಂಚಾಯತಿ ಅಧ್ಯಕ್ಷ ಇದ್ದು ಆ ಬಗ್ಗೆ ನಿಡಿ.1 ರಲ್ಲಿ ನಮೂದು ಇಲ್ಲ ಎಂದರೆ ಸರಿ. ನಿಡಿ.1 ಕ್ಕೆ ಬೆಳಗಟ್ಟಿ ಗ್ರಾಮದ ಸಾಕ್ಷಿದಾರರನ್ನು ಕರೆಸಿ ಸೃಷ್ಠಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪಕ್ಕಿರಪ್ಪನಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

8. ದಾವಾ ಆಸ್ತಿಗೆ ವಾದಿಯರು ಹಾಗು ಪ್ರತಿವಾದಿ ನಂ.4 ರಿಂದ 14 ರವರು ಸಂಬಂಧಿಸಿದ್ದು, ಪಂಚಾಯತಿಗೆ ಮಾಡಿಕೊಟ್ಟಿರುವ ಕ್ರಯ ಪತ್ರವು ಅವರ ಹಿಸ್ಸೆಗೆ ಬಂಧನಕಾರ ಆಗುವುದಿಲ್ಲ ಎಂದರೆ ಸರಿಯಲ್ಲ. ನಿಡಿ.1 ರಲ್ಲಿರುವ ಸಹಿ ಪಕ್ಕಿರಪ್ಪನಿಗೆ ಸಂಬಂಧಿಸದೆ ಇರುವ ಸಹಿ ಆಗಿದ್ದು, ಮಧ್ಯವರ್ತಿಗಳೊಂದಿಗೆ ಮಿಲಾಪಿಯಾಗಿ ಸೃಷ್ಠಿಸಿಕೊಂಡಿರುವ ದಾಖಲೆಯಾಗಿದೆ ಎಂದರೆ ಸರಿಯಲ್ಲ.

9. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದ ಮ್ಯೂಟೇಶನ ಹಾಗು ಆರ್.ಟಿ.ಸಿ. ಪ್ರತಿಗಳನ್ನು ನೋಡಿದ್ದು ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಸಾರ್ವಜನಿಕ ಪ್ರಕಟಣೆ ಮಾಡಿಲ್ಲ ಎಂದರೆ ಸರಿ. ವಾದಿಯರು ಮತ್ತು ಪ್ರತಿವಾದಿ ನಂ.4 ರಿಂದ 14 ರವರಿಗೆ ಖರೀದಿ

ವ್ಯವಹಾರ ತಿಳಿಯುತ್ತದೆ ಎಂಬ ಉದ್ದೇಶದಿಂದ ಸಾರ್ವಜನಿಕ ಪ್ರಕಟಣೆ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯರು ಹಾಗು ಪ್ರತಿವಾದಿ ನಂ.4 ರಿಂದ 14 ರವರು ಬೆಳಗಟ್ಟಿ ಗ್ರಾಮದಲ್ಲಿ ವಾಸಿಸುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾನು ಗ್ರಾಮ ಪಂಚಾಯತಿ ಅಧಿಕಾರಿಯಾಗಿದ್ದು ಗ್ರಾಮ ಪಂಚಾಯತಿ ವ್ಯಾಪ್ತಿಯ ಕುಟುಂಬಗಳ ಮಾಹಿತಿ ನನಗೆ ಇರುತ್ತದೆ ಎಂದರೆ ಸರಿ. ವಾದಿಯರು ಮತ್ತು ಪ್ರತಿವಾದಿ ನಂ.4 ರಿಂದ 14 ರವರು ಬೆಳಗಟ್ಟಿ ಗ್ರಾಮದಲ್ಲಿ ವಾಸಿಸುತ್ತಿಲ್ಲ ಎಂಬ ಮಾಹಿತಿ ತಿಳಿದಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ನಿಡಿ.1 ನ್ನು ಸೃಷ್ಟಿಸಿಕೊಂಡಿದ್ದು ಅದು ಖೊಟ್ಟಿ ಕ್ರಯ ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಯರು ಹಾಗು ಪ್ರತಿವಾದಿ ನಂ.4 ರಿಂದ 14 ರವರು ಮಾಲೀಕರಾಗಿದ್ದು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಇಲ್ಲಿಯವರೆಗು ಭೂ ಪರಿವರ್ತನೆ ಆಗಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ತಾಂತ್ರಿಕ ದೋಷ ಇರುವುದರಿಂದ ಪಹಣಿ ಪತ್ರಿಕೆ ಬದಲಾವಣೆಯಾಗದೆ ಕೃಷಿ ಜಮೀನಾಗಿ ಮುಂದುವರೆದಿದೆ ಎಂದರೆ ಸರಿಯಲ್ಲ.

11. ನಿಡಿ.1 ಸೃಷ್ಟಿಸಿಕೊಂಡಿರುವ ಕಾರಣ ದಾವಾ ಆಸ್ತಿಯ ವಿಚಾರವಾಗಿ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ನಿಡಿ.1 ಖೊಟ್ಟಿ ಖರೀದಿಯ ವಿಚಾರ ನನಗೆ ತಿಳಿದಿದ್ದರು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

<u>(ನನ್ನ ಉಖ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)</u>

ಓ.ಹೇಳಿ.ಕೇ.ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಲಕ್ಷ್ಮೇಶ್ವರ